ಒ ಎಸ್ 119/2017 ಪಿ.ಡಬ್ಲ್ಯೂ 1

ಇಂದು ದಿಃ 14.07.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 18ನೇ ಪ್ರತಿವಾದಿ ಪರ ಶ್ರೀ ಬಿ ವೈ ವಕೀಲರಿಂದಃ

ನಾನು 2ನೇ ತರಗತಿಯ ತನಕ ಓದಿದ್ದೇನೆ. ನನಗೆ ಓದಲು ಬರುತ್ತದೆ, ಬರೆಯಲು ಬರುವುದಿಲ್ಲ. ನಾನು ಈ ದಾವೆಯ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ನಾನು ಬೇರೆ ಬೇರೆ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಬರುತ್ತಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತು. ನಾನು ಜಮೀನಿನಲ್ಲಿ ವ್ಯವಸಾಯ ಮಾಡುತ್ತಿಲ್ಲ, ನನ್ನ ಭಾವ ವ್ಯವಸಾಯ ಮಾಡುತ್ತಿದ್ದಾರೆ. ನಾನು ನಮ್ಮೂರಾದ ಕರಳಾಪುರ ಗ್ರಾಮಕ್ಕೆ ಹೋಗುತ್ತಿರುತ್ತೇನೆ. ಅಲ್ಲಿ ನನ್ನ ಯಜಮಾನರ ಬಾಬ್ತು 3 ಎಕರೆ 9 ಗುಂಟೆ ಜಮೀನನ್ನು ನಾನೇ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಾವನಿಗೆ ಸುಮಾರು 10 ಎಕರೆ ಆಸ್ತಿ ಅವರ ತಂದೆ ತಾಯಿಯಿಂದ ಬಂದಿದೆ. ಆ ರೀತಿ ಬಂದಿದೆ ಎನ್ನುವ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ. ಎಲ್ಲಾ ದಾಖಲೆಗಳನ್ನು ತಯಾರು ಮಾಡಿಕೊಂಡೆ ದಾವೆ ಹಾಕಿದ್ದೇನೆ ಎಂದರೆ ಸರಿ. ದಾವೆ ತಯಾರು ಮಾಡುವಾಗ ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿಗಳು ಎನ್ನುವ ಬಗ್ಗೆ ದಾಖಲೆಗಳನ್ನು ವಕೀಲರಿಗೆ ಕೊಟ್ಟಿದ್ದು ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ಮಾವನ ತಂದೆಯ ಹೆಸರು ರಾಚಶೆಟ್ಟಿ. ರಾಚಶೆಟ್ಟಿ ಹೆಸರಿನಲ್ಲಿರುವ ದಾವಾ ಆಸ್ತಿಯ ದಾಖಲೆ ಕೊಟ್ಟಿದ್ದೀರಾ ಎಂದರೆ ಅವರ ಹೆಂಡತಿ ಲಿಂಗಮ್ಮರವರ ಹೆಸರಿನಲ್ಲಿರುವ ದಾಖಲೆ ಕೊಟ್ಟಿದ್ದೇನೆ ಎನ್ನುತ್ತಾರೆ. ಲಿಂಗಮ್ಮ ನನ್ನ ಮಾವನ ತಾಯಿ. ದಾವಾ ಆಸ್ತಿಯಲ್ಲಿ ನಾವು ಜೊತೆಗೆ ಇದ್ದೇವೆ ಎಂಬ ಬಗ್ಗೆ ದಾಖಲೆ ಕೊಟ್ಟಿಲ್ಲ. ದಾವಾ ಜಮೀನಿನಲ್ಲಿ ಬೆಳೆಯುವ ಬೆಳೆಯನ್ನು ಸಮನಾಗಿ ಹಂಚಿಕೊಳ್ಳುತ್ತೇವೆ, ಆ ಬಗ್ಗೆ ದಾಖಲೆ ಇಲ್ಲ. ನನ್ನ ಮಾವನ ಕುಟುಂಬ 7 ಜನ ಮಕ್ಕಳಿರುವ ದೊಡ್ಡ ಕುಟುಂಬವಾಗಿರುತ್ತದೆ. ಅವರೆಲ್ಲ ಅವರ ಹೆಂಡತಿ ಮಕ್ಕಳ ಜೊತೆ ಪ್ರತ್ಯೇಕ ವಾಸ ಇದ್ದಾರೆ ಎಂದರೆ ಸರಿ. ರಾಚಶೆಟ್ಟಿರವರ ಮಗ ಸಿದ್ದಶೆಟ್ಟಿ ನಂಜನಗೂಡಿನಲ್ಲಿ ಇದ್ದಾರೆ. ಅವರು ಈಗ ನಂಜನಗೂಡಿನಲ್ಲಿ ಇಲ್ಲ, ಕರಳಾಪುರ ಗ್ರಾಮದಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ಸಿದ್ದಶೆಟ್ಟಿರವರ ವಾಸ ಕರಳಾಪುರ ಎಂದು ತೋರಿಸುವ ವಿಳಾಸ ತಪ್ಪು. ಮಹದೇವಶೆಟ್ಟಿ ಕರಳಾಪುರದಲ್ಲಿ ಬೇರೆ ಮನೆಯಲ್ಲಿದ್ದಾರೆ. 12ನೇ ಪ್ರತಿವಾದಿ ಬಸವರಾಜಶೆಟ್ಟಿ ನಂಜನಗೂಡಿನಲ್ಲಿ ವಾಸ ಇದ್ದಾರೆ. 12ನೇ ಪ್ರತಿವಾದಿ ವಾಸ ಕರಳಾಪುರ ಗ್ರಾಮದಲ್ಲಿ ವಾಸ ಇದ್ದಾರೆಎಂದು ಕೊಟ್ಟಿರುವ ವಿಳಾಸ ತಪ್ಪೇ ಎಂದರೆ ಮೊದಲು ಅಲ್ಲೇ ಇದ್ದರು ಮಕ್ಕಳನ್ನು ಓದಿಸಲು ನಂಜನಗೂಡಿಗೆ 8-10 ವರ್ಷಗಳ ಹಿಂದೆ ಬಂದಿದ್ದಾರೆ ಎನ್ನುತ್ತಾರೆ. 12ನೇ ಪ್ರತಿವಾದಿ ನಂಜನಗೂಡಿನಲ್ಲಿ ವಾಸ ಇದ್ದಾರೆ ಎಂಬ ಬಗ್ಗೆ ದಾಖಲೆ ಕೊಟ್ಟಿಲ್ಲ. ಅವರು ಹೆಂಡತಿ ಮಕ್ಕಳ ಜೊತೆ ಪ್ರತ್ಯೇಕ ವಾಸ ಇದ್ದಾರೆ ಎಂದರೆ ಸರಿ. 12ನೇ ಪ್ರತಿವಾದಿ ಕರಳಾಪುರದಲ್ಲಿ ಜಮೀನು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮಾವ ಜೀವಂತ ಇರುವಾಗ ಅಂದರೆ 1970 ಅವರ ಮಕ್ಕಳಿಗೆ ಆಸ್ತಿಯಲ್ಲಿ ಭಾಗ ಕೊಟ್ಟಿದ್ದರು ಎಂದರೆ ಸರಿಯಲ್ಲ.  ಆ ಭಾಗದಲ್ಲಿ ನನ್ನ ಗಂಡನಿಗೆ 3 ಎಕರೆ 9 ಗುಂಟೆ ಜಮೀನು ಕೊಟ್ಟಿದ್ದಾರೆ ಎಂದರೆ ಸುಳ್ಳು. ಆ ಜಮೀನನ್ನು ನನ್ನ ಗಂಡ ಇರುವಾಗ ಅವರೇ ಮಾಡಿಕೊಂಡಿದ್ದು, ಈಗ ನಾನು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಜಂಟಿ ಕುಟುಂಬದಲ್ಲಿವೆ ಎಂಬ ಬಗ್ಗೆ ಆರ್ ಟಿ ಸಿ ಕೊಟ್ಟಿಲ್ಲ. ಅವರವರ ಜಾಗಕ್ಕೆ ಅವರವರೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಅವರವರ ಜಮೀನು ಅವರೇ ಮಾಡಿಕೊಂಡು, ಯಾರ ತಂಟೆಗೂ ಹೋಗದೆ ಇದ್ದಾರೆ ಎಂದರೆ ಸುಳ್ಳು. ನಾನು ನನ್ನ ಗಂಡನ ಪಾಲಿಗೆ ಬಂದ ಆಸ್ತಿಯ ಖಾತೆ ಮಾಡಿಸಿಕೊಂಡಿಲ್ಲ, ಉಳಿದವರೆಲ್ಲ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವನಿಗೆ ಪಿತ್ರಾರ್ಜಿತ ಆಸ್ತಿಯಾಗಿ ಯಾವ ಆಸ್ತಿಯೂ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನವರು ಕೂಲಿ ಕೆಲಸ ಮಾಡಿಕೊಂಡು ಜಮೀನು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಮಾವನ ತಾಯಿಗೆ ಈ ಆಸ್ತಿಗಳು ಬಂದಿದ್ದವು ಎಂದು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನುಗಳು ಖುಷ್ಕಿ ಜಮೀನುಗಳು ಎಂದರೆ ಎರಡೂ ಜಾತಿಯ ಜಮೀನುಗಳು ಇವೆ ಎನ್ನುತ್ತಾರೆ. ನನ್ನ ಮಾವನವರ ಕುಟುಂಬ ದೊಡ್ಡ ಕುಟುಂಬವಾಗಿದ್ದು, ಮಾವನವರ ಆಸ್ತಿಯಲ್ಲಿ ಯಾವುದೇ ಆದಾಯ ಇಲ್ಲದ ಕಾರಣ ಅವರು ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನನ್ನ ಗಂಡ ನಂಜನಗೂಡಿಗೆ ಬಂದಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಅವರ ಚಿಕ್ಕಪ್ಪನಾದ ಮಶಣಶೆಟ್ಟಿ ಜೊತೆ ವಾಸ ಇದ್ದರು ಎಂದರೆ ಸರಿಯಲ್ಲ.

ಸುಮಾರು ವರ್ಷಗಳ ಕಾಲ 1ನೇ ಪ್ರತಿವಾ ಅವರ ಚಿಕ್ಕಪ್ಪನ ಮನೆಯಲ್ಲಿ ವಾಸ ಇದ್ದರು ಎಂದರೆ ನಾವು ಅಲ್ಲೇ ಇದ್ದೆವು, ಅವರು ಸಹ ಅಲ್ಲೇ ಇದ್ದರು ಎನ್ನುತ್ತಾರೆ. ಸಿದ್ದಶೆಟ್ಟಿರವರು ಮಶಣಶೆಟ್ಟಿರವರ ಮನೆಯಲ್ಲಿ 20 ವರ್ಷಗಳಿಂದ ಇದ್ದು ಓಡಾಡುತ್ತಿದ್ದರು. ನನ್ನ ಮಾವನವರು ಮಕ್ಕಳನ್ನು ನೋಡಿಕೊಳ್ಳಲು ಆಗುವುದಿಲ್ಲ ಎಂದು ಅವರ ಚಿಕ್ಕಪ್ಪನ ಮನೆಯಲ್ಲಿ ಬಿಟ್ಟಿದ್ದರು ಎಂದರೆ ಸರಿಯಲ್ಲ.  ಸಿದ್ದಶೆಟ್ಟಿ ಮಶಣಶೆಟ್ಟಿ ಮನೆಯಲ್ಲಿದ್ದ ಕಾರಣ ಅವರ ಹೆಸರಿನಲ್ಲಿ ಜಮೀನು ತೆಗೆದುಕೊಂಡಿದ್ದರು ಎಂದರೆ ಸುಳ್ಳು.

ದಾವಾ ಜಮೀನಿನ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ದಾವೆಯಲ್ಲಿ ತೋರಿಸಿರುವ ಯಾವ ಆಸ್ತಿಗೂ ಚೆಕ್ಕುಬಂದಿ ತೋರಿಸಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ವಿದ್ಯಾಭ್ಯಾಸಕ್ಕೆ ಮಶಣಶೆಟ್ಟಿ ಸಹಾಯ ಮಾಡಿ ಅವರ ಮನೆಯಲ್ಲಿ ಓದಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ 7ನೇ ತರಗತಿ ಓದಿರುತ್ತಾರೆ. 1ನೇ ಪ್ರತಿವಾದಿಯು ಯಾವುದೇ ಜಮೀನನ್ನು ಯಾರಿಂದಲೂ ಖರೀದಿಸಿಲ್ಲ. 1ನೇ ಪ್ರತಿವಾದಿ ಮಶಣಶೆಟ್ಟಿ ಸೇವೆ ಮಾಡಿದ ಕಾರಣ ಗುಂಡ್ಲುಪೇಟೆ ತಾಲ್ಲೂಕಿನ ತೊಂಡವಾಡಿ ಗ್ರಾಮದಲ್ಲಿ 10 ಎಕರೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ಸುಳ್ಳು. ಆ ಆಸ್ತಿಯನ್ನು ಸಿದ್ದಶೆಟ್ಟಿರವರು  ಮಶಣಶೆಟ್ಟಿ ಗಮನಕ್ಕೆ ಬಾರದಂತೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಅದನ್ನು ಪ್ರಶ್ನಿಸಿದಾಗ ಸಿದ್ದಶೆಟ್ಟಿರವರು  ಮತ್ತು ಮಶಣಶೆಟ್ಟಿ ನಡುವೆ ವಿವಾದಕ್ಕೆ ಕಾರಣವಾಯಿತು ಎಂದರೆ ಸರಿಯಲ್ಲ. ನಂತರ ವಿವಾದ ಅವರವರ ನಡುವೆ ಬಗೆಹರಿದು ಸಿದ್ದಶೆಟ್ಟಿರವರು 10 ಎಕರೆ ಪೈಕಿ 1 ಎಕರೆ 32 ಗುಂಟೆ ಜಮೀನನ್ನು 18ನೇ ಪ್ರತಿವಾದಿ ಕೃಷ್ಣಸ್ವಾಮಿಗೆ

ಕೊಟ್ಟಿದ್ದಾರೆ ಎಂದರೆ ಸರಿ. ಕೃಷ್ಣಸ್ವಾಮಿಗೆ ದಾನ ಪತ್ರದ ಮೂಲಕ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಮಾಡಿಸಿಕೊಂಡಿರಬಹುದು ಎನ್ನುತ್ತಾರೆ. ಆ ಲಗಾಯಿತಿನಿಂದ ಕಂದಾಯವನ್ನು 18ನೇ ಪ್ರತಿವಾದಿ ಪಾವತಿಸುದ್ದಾರೆ ಎಂದರೆ ಸರಿಯಲ್ಲ. ಆರ್ ಟಿ ಸಿ ಉಲ್ಲೇಖವನ್ನು ಪ್ರಶ್ನಿಸಿ ಯಾವುದೇ ಕಂದಾಯ ನ್ಯಾಯಾಲಯಕ್ಕೆ ಅರ್ಜಿ ಹಾಕಿಲ್ಲ. ಆ ಆಸ್ತಿಯು ಸಿದ್ದಶೆಟ್ಟರವರ ಸ್ವಂತ ಆಸ್ತಿ ಆದ ಕಾರಣ 18ನೇ ಪ್ರತಿವಾದಿಗೆ ದಾನ ಮಾಡಿದ್ದು ಆ ಆಸ್ತಿಯಲ್ಲಿ ಯಾರಿಗೂ ಹಕ್ಕಿಲ್ಲ ಎಂದರೆ ಸರಿಯಲ್ಲ. ಮಶಣಶೆಟ್ಟಿ ಹಾಗೂ ನಮ್ಮ ಕುಟುಂಬಕ್ಕೆ ಸಂಬಂಧ ಸರಿಯಿಲ್ಲ ಎಂದರೆ ಸುಳ್ಳು, ನಾವು ಚೆನ್ನಾಗಿದ್ದೇವೆ ಎನ್ನುತ್ತಾರೆ. ಮಶಣಶೆಟ್ಟಿಗೆ ನಂಜನಗೂಡಿನ 5ನೇ ಕ್ರಾಸ್ ನಲ್ಲಿದ್ದು ಅದನ್ನು ನನ್ನ ಯಜಮಾನರಿಗೆ ಅನುಮತಿ ಆಧಾರದಲ್ಲಿ ವಾಸಿಸಲು ಕೊಟ್ಟಿದ್ದಾರೆ ಎಂದರ ಸರಿ. ಆ ಮನೆಯನ್ನು ನಂತರ ಮಶಣಶೆಟ್ಟಿರವರು ಅವರ ಮಗನಾದ ಡಾ. ಶ್ರೀನಿವಾಸ್ ಗೆ ಕೊಟ್ಟರು ಎಂದರೆ ಸರಿ. ಆ ಮನೆಯನ್ನು ನಾವು ಖಾಲಿ ಮಾಡದ ಕಾರಣ ನಮ್ಮ ವಿರುದ್ದ ಡಾ. ಶ್ರೀನಿವಾಸ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಆ ತೀರ್ಪನ್ನು ಪ್ರಶ್ನಿಸಿ ನಾನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಕ್ಕೆ ಹೋಗಿದ್ದು ಎಲ್ಲಾ ನ್ಯಾಯಾಲಯಗಳಲ್ಲೂ ಸಹ ಡಾ. ಶ್ರೀನಿವಾಸ್ ಪರ ತೀರ್ಪು ಆಗಿದೆ ಎಂದರೆ ಸರಿ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ನನ್ನ ಮೇಲ್ಮನವಿ ದಾಖಲಾಗಿರಲಿಲ್ಲ ಎಂದರೆ ಸರಿ. ಆ ವೈಮನಸ್ಸನ್ನು ಇಟ್ಟುಕೊಂಡು ಕೃಷ್ಣಸ್ವಾಮಿ ಆಸ್ತಿಯನ್ನು ಸಹ ದಾವೆಯಲ್ಲಿ ಸೇರಿಸಿ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ ನಂ.15 ಹೊಲ ಆಗಿರುತ್ತದೆ. ಈಗ ಸದರಿ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯುತ್ತಿಲ್ಲ, ಈಗ ನೆಸ್ಲೇ ಕಂಪನಿ ಮತ್ತು ಇತರರು ಬಾಡಿಗೆಯಲ್ಲಿ ಸಹ ಇದ್ದಾರೆ. ಸದರಿ ಜಮೀನು ಈಗ ಅನ್ಯಕ್ರಾಂತ ಆಗಿದೆ ಎಂದರೆ ಸರಿಯಲ್ಲ. ನನ್ನ ಭಾವ 1ನೇ ಪ್ರತಿವಾದಿ ಸದರಿ ಜಮೀನನ್ನು ಅನ್ಯಕ್ರಾಂತ ಮಾಡಿಸಿದ್ದು ಅದು ಪಂಚಾಯಿತಿ ವ್ಯಾಪ್ತಿಯ ಜಮೀನಾಗಿರುತ್ತದೆ ಎಂದರ ಗೊತ್ತಿಲ್ಲ.

ಇತ್ತೀಚಿಗೆ ಆಸ್ತಿಗಳ ಮೌಲ್ಯ ಹೆಚ್ಚಾಗಿದೆ ಎಂದರೆ ಸರಿ. ಅದೇ ರೀತಿ 18ನೇ ಪ್ರತಿವಾದಿಗೆ ಕೊಟ್ಟ ಜಮೀನಿನ ಮೌಲ್ಯ ಸಹ ಹಲವು ಪಟ್ಟು ಹೆಚ್ಚಾಗಿದೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಗಳ ನಡುವೆ ಈಗ ಯಾವುದೇ ಒಟ್ಟು ಕುಟುಂಬದ ವ್ಯವಸ್ಥೆ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆ ಕಾರಣ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗುವುದಿಲ್ಲ ಎಂದರೆ ಸರಿಯಲ್ಲ. ಆ ಜಮೀನನ್ನು 18ನೇ ಪ್ರತಿವಾದಿಗೆ ಮಾರಾಟ ಮಾಡಿದ ಕಾರಣ ಈಗ ಅವರು ಆ ಜಮೀನಿನ ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ. ಅನಾವಾಶ್ಯಕವಾಗಿ 18ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸುಳ್ಳು. ನಾನು ಮತ್ತು ಇತರ ಪ್ರತಿವಾದಿಗಳು ಸೇರಿಕೊಂಡು ವೈಮನಸ್ಸಿನಿಂದ 18ನೇ ಪ್ರತಿವಾದಿ ಆಸ್ತಿಯನ್ನು ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ನನ್ನ ಅಳಿಯನ ಮನೆ ಬೆಂಗಳೂರಿನಲ್ಲಿ ಇದ್ದೇನೆ. ಈ ದುರ್ವ್ಯಾಜ್ಯಕ್ಕೆ ನನ್ನ ಅಳಿಯನೇ ಬೆಂಬಲವಾಗಿದ್ದಾನೆ ಎಂದರೆ ಸರಿಯಲ್ಲ. ನಾನು ವಿದ್ಯಾವಂತಳಲ್ಲದ ಕಾರಣ ದಾವೆ ಸಲ್ಲಿಸಲು ದಾಖಲೆಗಳನ್ನು ನನ್ನ ಅಳಿಯ ಒದಗಿಸಿದ್ದಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 18ನೇ ಪ್ರತಿವಾದಿಯ ಆಸ್ತಿಯಾಗಿದ್ದು ಯಾರಿಗೂ ಸಹ ವಿಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. 15ನೇ ಅನುಕ್ರಮ ಆಸ್ತಿ ನಂಜನಗೂಡಿನ ನೀಲಕಂಠ ನಗರದಲ್ಲಿದೆ. ಆ ಕಾರಣ 15ನೇ ಅನುಕ್ರಮ ಆಸ್ತಿ ಕರಳಾಪುರ ಗ್ರಾಮದಲ್ಲಿ ಇದೆ ಎನ್ನುವ ಮಾಹಿತಿ ಸುಳ್ಳು

ಎಂದರೆ ಆ ಬಗ್ಗೆ ನಾನು ನೋಡಬೇಕು ಎನ್ನುತ್ತಾರೆ. ಆಸ್ತಿಯ ವಿಚಾರಗಳು ಏನೂ ತಿಳಿಯದಿದ್ದರೂ ಸಹ ಅವರಿವರ ಮಾತು ಕೇಳಿ 18ನೇ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಬಾಜುದಾರರ ಬಗ್ಗೆ ನನಗೆ ಅಲ್ಪಸ್ವಲ್ಪ ಗೊತ್ತು. ಅವರನ್ನು ಈ ದಾವೆಯಲ್ಲಿ ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಬಹುದು.

1 ರಿಂದ 6ನೇ ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.